ಅಸಲು ದಾವಾ ಸಂಖ್ಯೆ **244/2018** ಪಿ.ಡಬ್ಲ್ಯೂ- 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **05.08.2025**

ಪಾಟೀ ಸವಾಲು ಃ ಶ್ರೀ **MD** ನ್ಯಾಯಾವಾದಿಗಳಿಂದಃ

ನನ್ನ ಮೂಲ ನಿವಾಸ ಹೆಚ್.ಎನ್ ಕಾವಲು. ಸದರಿ ಹೆಚ್.ಎನ್ ಕಾವಲು ಗ್ರಾಮದಲ್ಲಿ ನಾನು ಸುಮಾರು 20 ವರ್ಷಗಳಿಂದ ವಾಸ ಇದ್ದೇನೆ, ಸಾಕ್ಷಿಯು ಮುಂದುವರೆದು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಹೆಚ್.ಎನ್ ಕಾವಲು ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ.

2. ನಾನು ಹೆಚ್.ಎನ್ ಕಾವಲು ಗ್ರಾಮದಲ್ಲಿ ವಾಸ ಇರುವ ಸಂಬಂಧ ನನ್ನ ಪಡಿತರ ಚೀಟಿ , ಚುನಾವಣಾ ಮತದಾನ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಅನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನಮ್ಮ ವಕೀಲರು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ.

3. ಬೋರಿಕೊಪ್ಪಲು ಎಂಬ ಹೆಸರಲು ನಾನು ಕೇಳಿರುತ್ತೇನೆ. ಸದರಿ ಬೋರಿಕೊಪ್ಪಲು ಗ್ರಾಮದಲ್ಲಿ ನನ್ನ ತಾತಾ ತಿಮ್ಮಯ್ಯ ಮತ್ತು ಅಜ್ಜಿ ಬೊಮ್ಮಮ್ಮ ವಾಸ ಇದ್ದರು. ನನ್ನ ತಾತಾ ಮತ್ತು ಅಜ್ಜಿ ತಮ್ಮ ಜೀವಿತ ಅವಧಿಯಲ್ಲಿ ಬೋರಿಕೊಪ್ಪಲು ಗ್ರಾಮದಲ್ಲೇ ವಾಸ ಇದ್ದರು ಎಂದರೆ ಸರಿ. ನನ್ನ ತಾತಾ ಮತ್ತು ಅಜ್ಜಿಯು ಬೆಸ್ತರ ಜನಾಂಗವಾಗಿದ್ದು , ಅವರ ವೃತಿ ಮೀನು ಹಿಡಿಯುವುದು ಮತ್ತು ಸುಣ್ಣ ಬೇಯಿಸುವುದು ಎಂದೆರೆ ಸರಿ. ಸದರಿ ವೃತಿಯನ್ನು ಒಂದೇ ಸ್ಥಳದಲ್ಲಿ ಇದ್ದು ಮಾಡಲು ಆಗುವುದಿಲ್ಲ ಆಗಾಗ ಸ್ಥಳವನ್ನು ಬದಲಾಯಿಸುತ್ತಿರಬೇಕು ಎಂದರೆ ಸರಿ.

4. ಸದರಿ ವೃತ್ತಿಗಾಗಿ ನನ್ನ ತಾತಾ ಮತ್ತು ಅಜ್ಜಿಯು ಸುಮಾರು 50 ವರ್ಷಗಳ ಹಿಂದೆಯೇ ಬೋರಿಕೊಪ್ಪಲು ಗ್ರಾಮದಿಂದ ಬಂದು ಹೆಚ್. ಎನ್. ಕಾವಲು ಗ್ರಾಮದಲ್ಲಿ ನೆಲಸಿದರು ಎಂದರೆ ಸರಿ.

5. ನನ್ನ ತಾತಾ ತಿಮ್ಮಯ್ಯನವರಿಗೆ ನನ್ನ ತಂದೆ ಕರಿಯಯ್ಯ ಮತ್ತು ನನ್ನ ಚಿಕ್ಕಪ್ಪಂದಿರು ಆದ ಬೋರಯ್ಯ ಮತ್ತು ಮೂಡಲಗಿರಿ ಎಂಬ 3 ಜನ ಮಕ್ಕಳು ಎಂದರೆ ಸರಿ. ನನ್ನ ತಂದೆ ಬೋರಿಕೊಪ್ಪಲು ಗ್ರಾಮದಲ್ಲೇ ನೆಲಸಿದರು ಎಂದರೆ ಸರಿ. ಮೂಡಲಗಿರಿಯವರು ತಮ್ಮ ಜೀವನೋಪಯೋಗಕ್ಕಾಗಿ ತಮ್ಮ ಚಿಕ್ಕ ವಯಸ್ಸಿನಲ್ಲೇ ಬೆಂಗಳೂರಿಗೆ ಹೋಗಿ ನೆಲಸಿದರು ಎಂದರೆ ಸರಿ. ನನ್ನ ತಾತಾ ಮರಣ ಹೊಂದಿದ ನಂತರ ನನ್ನ ಚಿಕ್ಕಪ್ಪ ಬೋರಯ್ಯರವರು ನನ್ನ ಅಜ್ಜಿಯ ಜೊತೆ ಹೆಚ್.ಎನ್.ಕಾವಲು ಗ್ರಾಮದಲ್ಲಿ ನೆಲಸಿದರು ಎಂದರೆ ಸರಿ.

6. ನನ್ನ ಚಿಕ್ಕಪ್ಪ ಮೂಡಲಗಿರಿಯವರಿಗೆ ಬೆಂಗಳೂರಿನಲ್ಲಿ ಸ್ವಂತ ಮನೆ ಇರುವುದನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಮೂಾಡಲಗಿರಿಯವರಿಗೆ ಬೆಂಗಳೂರಿನಲ್ಲಿ ಸ್ವಂತ ಮನೆ ಇರುವುದಾಗಿ ಹೇಳಿದ್ದು ಆ ರೀತಿ ಹೇಳಿದ ಮೇರೆಗೆ ಆದರೂ ಮೂಡಲಗಿರಿಯವರು ಬೆಂಗಳೂರಿನಲ್ಲಿ ಸ್ವಂತ ಮನೆ ಇದೆಯಾ ಇಲ್ಲವೋ ಎಂದು ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

7. ಮೂಡಲಗಿರಿಯವರು ಬೆಂಗಳೂರಿನ ಯಾವ ವಿಳಾಸದಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವತ್ತು ಅವರು ವಾಸ ಇರುವ ಬೆಂಗಳೂರಿನ ನಿವಾಸಕ್ಕೆ ಹೋಗಿರುವುದಿಲ್ಲ. ಮೂಡಲಗಿರಿಯವರು ಯಾವತ್ತು ಬೋರಿಕೊಪ್ಪಲು ಗ್ರಾಮಕ್ಕೆ ಬಂದು ನೆಲಸಿರುವುದಿಲ್ಲ ಎಂದರೆ ಸಾಕ್ಷಿಯು ಊರಿನಲ್ಲಿ ನಡೆಯು ಹಬ್ಬ ಹರಿದಿನಗಳಿಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

8. ನಾನು ಯಾವತ್ತು ಮೂಡಲಗಿರಿ ಯವರ ಕುಟುಂಬದವರನ್ನು ಊರಿನ ಹಬ್ಬಕ್ಕೆ ಕರೆಯಲು ಬೆಂಗಳೂರಿಗೆ ಹೋಗಿರುವುದಿಲ್ಲ ನನ್ನ ಇನ್ನೊಬ್ಬ ಚಿಕ್ಕಪ್ಪ ಬೋರಯ್ಯರವರು ಹೋಗುತ್ತಿದ್ದರು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ